ಸುತ್ತುತ್ತಿದ್ದ ಪೊಲೀಸ, ''ಅಸಾಧ್ಯಳು ಮಾರಾಯ ನಿನ್ನ ಹೆಂಡತಿ, ಕೈ ಕುಯ್ದುಕೊಂಡು ಬಿಡುತ್ತಿದ್ದಳು'' ಎನ್ನುತ್ತಾ ವಿಚಿತ್ರ ಮುಖ ಮಾಡಿದ. ನಡೆದಿದ್ದೇನೆಂದು ಹೆಚ್ಚು ಕಮ್ಮಿ ಅರ್ಥವಾಗಿತ್ತು ಈತನಿಗೆ.

ನಂತರ ಪೊಲೀಸರು ಅವರವರ ನಡುವೆಯೇ ಏನೇನೋ ಚರ್ಚಿಸಿ ಚಂದ್ರಕಾಂತನನ್ನು ಅಲ್ಲಿಂದ ಹೋಗಬಹುದೆಂದು ತಿಳಿಸಿದರು. ಹೋಗುವ ಮುನ್ನ ಪೊಲೀಸನೊಬ್ಬ ಆತನನ್ನು ತಡೆದು ನಿಲ್ಲಿಸಿ, ''ನೀನು ಇಲ್ಲಿಗೆ ಯಾಕೆ ಬಂದಿದ್ದೀಯೋ ಆ ಕೆಲಸ ನೋಡಿಕೊಂಡು ತೆಪ್ಪಗಿರು. ಬೇಡದ ರಾಜಕಾರಣಕ್ಕೆ ತಲೆ ಹಾಕಿದೆಯೋ ಕಂಬಿಯ ಹಿಂದೆ ಪರ್ಮನೆಂಟ್ ಕುಳಿತುಕೊಳ್ಳಬೇಕಾದೀತು'' ಎಂದು ಗಂಭೀರವಾಗಿ ಎಚ್ಚರಿಕೆ ಕೊಡುವಂತೆ ಹೇಳಿದ. ಅದನ್ನು ಸುಮಾರಾಗಿ ಅರ್ಥಮಾಡಿಕೊಂಡ ಚಂದ್ರಕಾಂತ 'ಹೂಂ...' ಎನ್ನುತ್ತಾ ತಲೆ ಅಲ್ಲಾಡಿಸಿ ಚೇತನಾಳ ಕೈ ಹಿಡಿದು ಹೊರಬಿದ್ದ. ಹೊರ ಬರುತ್ತಲೇ, ''ಇದೇನು ಮಾಡಿಕೊಂಡೆ?... ನಾನಿಲ್ಲಿರುವುದು ನಿನಗೇಗೆ ಗೊತ್ತಾಯಿತು?'' ಇತ್ಯಾದಿ ಪ್ರಶ್ನೆಗಳ ಸುರಿಮಳೆಗೈಯ್ಯತೊಡಗಿದ.

''ಎಲ್ಲ ಹೇಳುತ್ತೇನೆ, ಆದರೆ ಇಲ್ಲಿಂದ ಹೊರಡಿ. ಮೊದಲು ಮನೆ ಸೇರಿಕೊಳ್ಳೋಣ'' ಎಂದಳು ಚೇತನಾ.

''ಇಲ್ಲ, ಮೊದಲು ಆಸ್ಪತ್ರೆಗೆ ಹೋಗಿ ನಿನ್ನ ಕೈ ಸರಿಯಾಗಿ ಡ್ರೆಸಿಂಗ್ ಮಾಡಿಸಿಕೊಂಡು ಹೋಗೋಣ'' ಎಂದ ಚಂದ್ರಕಾಂತ. ಆಫೀಸಿನವ ಇನ್ನೂ ಅಲ್ಲಿಯೇ ಇದ್ದ. ಆತನೇ ಇವರನ್ನು ಕಾರಲ್ಲಿ ಆಸ್ಪತ್ರೆಗೂ ಕರೆದುಕೊಂಡು ಹೋದ.

★★★

ಹಿಂದಿರುಗಿ ಬರುವಾಗ ಕಾರಲ್ಲಿ ಮೌನ. ಚಂದ್ರಕಾಂತನ ತಲೆಯಲ್ಲಿ ನೂರಾರು ಆಲೋಚನೆಗಳು. ಮನೆ ತಲುಪುವವರೆಗೂ ತನ್ನಾವ ಪ್ರಶ್ನೆಗಳಿಗೂ ಚೇತನಾ ಉತ್ತರಿಸಲಾರಳೆಂಬುದು ಗೊತ್ತಿತ್ತು ಆತನಿಗೆ. ಇದ್ದಕ್ಕಿದ್ದಂತೆಯೇ ಆಕೆಯ ಮೇಲೆ ಮೋಹ ಉಕ್ಕಿಬಂತು. ''ಇನ್ನೊಮ್ಮೆ ನಮ್ಮ ಬಂದರು ನಿರ್ಮಾಣದ ಜಾಗಕ್ಕೆ ಹೋಗೋಣ. ಎಷ್ಟು ಹೊತ್ತಾದರೂ ಅಡ್ಡಿಯಿಲ್ಲ. ಸಮುದ್ರದಲ್ಲಿ ಡಾಲ್ಫಿನ್ ಕಾಣುವವರೆಗೂ ಕಾಯೋಣ. ಬೇಕಾದರೆ ಆ ಇಡೀ ದಿನ ರಜೆ ಹಾಕಿಬಿಡುತ್ತೇನೆ. ಆಗಬಹುದಾ?... ನಾಳೆಯೇ ಪರ್ಮಿಷನ್ನಿಗೆ ಅಪ್ಲೈ ಮಾಡುವೆ'' ಅನ್ನುತ್ತ ಚೇತನಾಳ ಉತ್ತರಕ್ಕಾಗಿ ಕಾದ.

## ಕರ್ಕಿ ಕೃಷ್ಣಮೂರ್ತಿ

ವೃತ್ತಿಯಲ್ಲಿ ಸಿವಿಲ್ ಎಂಜಿನಿಯರ್. ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದ ಕರ್ಕಿ ಅವರ ಊರು. ಪ್ರಸ್ತುತ ಬೆಂಗಳೂರಿನಲ್ಲಿ ವಾಸವಾಗಿರುವ ಅವರು ಬಹುರಾಷ್ಟ್ರೀಯ ಕಂಪನಿಯೊಂದರಲ್ಲಿ ಸೀನಿಯರ್ ಜನರಲ್ ಮ್ಯಾನೇಜರ್. 'ಮಳೆ ಮಾರುವ ಹುಡುಗ' ಮತ್ತು 'ಗಾಳಿಗೆ ಮೆತ್ತಿದ ಬಣ್ಣ' ಎನ್ನುವ ಕಥಾಸಂಗ್ರಹಗಳನ್ನು ಪ್ರಕಟಿಸಿದ್ದಾರೆ. ಹಲವಾರು ಲೇಖನಗಳು, ಕತೆಗಳು ಕನ್ನಡದ ಪ್ರಮುಖ ಪತ್ರಿಕೆಗಳಲ್ಲಿ ಪ್ರಕಟವಾಗಿವೆ.